Sri Mahadeswara Sugar Co-operative Society at Kollegal.

387 SRI G. RAJU GOWDA (Hanur).—Will the Minister for Co-operation be pleased to state :—

whether it is a fact that the Administrative Officer, Mahadeswara Co-operative Sugar Factory had been to Ooty with his family members in a Factory vehicle on 23-4-79 and 24-4-79 on private duties ?

SRI A. B. JAKANUR (Minister for Co-operation)

No.

ಶ್ರೀ ಜಿ. ರಾಜುಗೌಡ.—ಸ್ವಾಮಿ, ತಮ್ಮ ಉತ್ತರದಲ್ಲಿ ''ನಿಜವಲ್ಲ'' ಎಂದು ಉತ್ತರ ಕೊಟ್ಟಿರುವುದನ್ನು ನೋಡಿ ನಾನು ವಿಷಾದ ಪಡಬೇಕಾಗಿದೆ: ಆ ಕಾರ್ಖಾನೆಯಲ್ಲಿರತಕ್ಕ ಎಂ.ವೈ.ವಿ. ೬ ವಾಹನದಲ್ಲಿ ಆ ಅಧಿಕಾರಿ ಸಂಸಾರ ಸಮೇತರಾಗಿ ಊಟಿಗೆ ವಿಹಾರಾರ್ಥವಾಗಿ ಹೋಗಿರುವುದನ್ನು ಪುರಾವೆಗಳ ಸಹಿತ ರುಜುವಾತು ಮಾಡಿಕೊಟ್ಟರೆ ಆ ಅಧಿಕಾರಿಯ ಮೇಲೆ ತಾವು ಸೂಕ್ತ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎ.ಬಿ.ಜಕನೂರ್.—ಇದುವರೆಗೆ ನಾವು ಪರಿಶೀಲನೆ ನಡೆಸಿರುವುದರಿಂದ ತಿಳಿದು ಬಂದಿರುವುದು ಅವರು ಎಲ್ಲಿಯೂ ಹೋಗಿಲ್ಲ ; ಎಂದು ಕಂಡು ಬಂದಿದೆ. ಲಾಗ್‌ಬುಕ್‌ನಲ್ಲಿ ಎಂಟ್ರಿ ಇದೆ. ಮಾನ್ಯ ಸದಸ್ಯರು ಪುರಾವೆ ಸಹಿತವಾಗಿ ರುಜುವಾತು ಮಾಡಿಕೊಟ್ಟರೆ ಖಂಡಿತ ಆತನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ.—ಈ ಕಾರ್ಖಾನೆ ನಷ್ಟ ಅನುಭವಿಸುವುದಕ್ಕೆ ಆ ಅಧಿಕಾರಿಯೇ ಕಾರಣವೆಂದು ದೂರು ಕೊಟ್ಟಿದ್ದರೂ ಅವರನ್ನು ಅಲ್ಲಿಂದ ವರ್ಗ ಮಾಡದಿರಲು ಕಾರಣ ಏನು ? ಆತನ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ ?

ಶ್ರೀ ಎ ಬಿ. ಜಕನೂರ್.—ನೀವು ಮಾಡಿರತಕ್ಕ ಇತರ ಆರೋಪಗಳು ಯಾವುವೂ ನಮ್ಮ ಗಮನಕ್ಕೆ ಬಂದಿಲ್ಲ. ಅಂಥ ಆಪಾದನೆಗಳೇನಾದರೂ ಇದ್ದರೆ, ಅವುಗಳನ್ನು ನಮ್ಮ ಗಮನಕ್ಕೆ ತಂದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

SRI C. M. ARUMUGHAM.—Sir, I want to make a submission. It was stated that the hon. member may send his question to the Hon'ble Minister so that Hon'ble Minister could reply in writing. That i not the procedure. The Ministers must reply on the floor of the House so that if the Minister were to assure something the assurance Commttee will take it up.The very purpose of Question Hour is to elicit information and when necessary for a follow-up action. Any deviation that has been suggested may not be palatable.

ಶ್ರೀ ಎಸ್. ಬಂಗಾರಪ್ಪ.—ಸದಸ್ಯರು ಪ್ರಶ್ನೆಗಳನ್ನು ಕೇಳಿ ಸಚಿವರಿಂದ ಉತ್ತರ ಪಡೆಯಬೇಕು. ಅದು ಸದಸ್ಯರ ಮೂಲಭೂತವಾದ ಹಕ್ಕು. ಇದನ್ನು ಎಲ್ಲರೂ ಒಪ್ಪುತ್ತಾರೆ. ನಾನು ಸದಸ್ಯರನ್ನು ಪ್ರಶ್ನೆಗಳನ್ನು ಕೇಳಬಾರದೆಂದು ಹೇಳಲಿಲ್ಲ. ಆ ಕಡೆ ಕೂತುಕೊಂಡು ನನಗೂ ೧೦ ವರ್ಷಗಳ ಅನುಭವ ಇದೆ. Since the next question has already been called and the Minister concerned had already answered, it is not fair on our part to again go back to the previous question.